# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 741 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | : | 13-07-2023 |
| **ಉತ್ತರಿಸುವ ಸಚಿವರು** | : | ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ಸ್ವದೇಶಿ ದರ್ಶನ್" ಮತ್ತು "ಪ್ರಸಾದ್" ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆಯೇ; | ಕೇಂದ್ರ ಪುರಸ್ಕೃತ "ಪ್ರಸಾದ್ ಯೋಜನೆ"ಯಡಿ, ಮೈಸೂರು ಜಿಲ್ಲೆಯ ಶ್ರೀ ಚಾಮುಂಡೇಶ್ವರಿ ದೇವಿ ಸನ್ನಿಧಾನವನ್ನು ರೂ.45.70 ಕೋಟಿಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ ದಿನಾಂಕ: 14.06.2023 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಆದರೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಇದುವರೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>ಕೇಂದ್ರ ಪುರಸ್ಕೃತ "ಪ್ರಸಾದ್ ಯೋಜನೆ" -2.0 ರಡಿ, (1) ಮಧ್ವವನ ಕುಂಜಾರುಗಿರಿ, ಉಡುಪಿ ಜಿಲ್ಲೆ. (2) ಪಾಪನಾಶ ದೇವಸ್ಥಾನ, ಬೀದರ್ ಜಿಲ್ಲೆ (3) ಶ್ರೀ ಕ್ಷೇತ್ರ ಶ್ರೀ ರೇಣುಕಾ ದೇವಿ ಯಲ್ಲಮ್ಮ ದೇವಸ್ಥಾನ ಸವದತ್ತಿ, ಬೆಳಗಾವಿ ಜಿಲ್ಲೆ, ಈ 03 ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ದಿನಾಂಕ: 21.09.2022 ರಂದು ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಆದರೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>**ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲವಾದ್ದರಿಂದ,** ರಾಜ್ಯದಲ್ಲಿ "ಸ್ವದೇಶಿ ದರ್ಶನ್" ಮತ್ತು "ಪ್ರಸಾದ್" ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ. ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. |
| ಆ) | ಹಾಗಿದ್ದಲ್ಲಿ, ಈ ಯೋಜನೆಯ ಉದ್ದೇಶವೇನು; ಈ ಯೋಜನೆಗಳಲ್ಲಿ ಈವರೆಗೆ ರಾಜ್ಯದಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ; ಎಷ್ಟು ಕಾಮಗಾರಿಗಳಿಗೆ ಅನುಮೋದನೆ ದೊರೆತಿದೆ; ಎಷ್ಟನ್ನು ಅನುಷ್ಠನಗೊಳಿಸಲಾಗಿದೆ; ಉಳಿಕೆ ಎಷ್ಟು ಕಾಮಗಾರಿಗಳಿಗೆ ಅನುಮೋದನೆ ದೊರೆಯಬೇಕಾಗಿದೆ; ಅನುಮೋದನೆ ದೊರೆಯದಿರಲು ಕಾರಣಗಳೇನು; (ಕಾಮಗಾರಿವಾರು ವಿವರವಾದ ಮಾಹಿತಿಯನ್ನು ನೀಡುವುದು) | ಕೇಂದ್ರ ಸರ್ಕಾರದ ಸ್ವದೇಶ್ ದರ್ಶನ್ ಹಾಗೂ ಪ್ರಸಾದ್ ಯೋಜನೆಗಳ ಪ್ರಮುಖ ಉದ್ದೇಶಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ.<br><br>1. **ಕೇಂದ್ರ ಸರ್ಕಾರದ ಸ್ವದೇಶ್ ದರ್ಶನ್ -2.0** ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಒಟ್ಟು 08 ಯೋಜನೆಗಳನ್ನು ಗುರುತಿಸಿದ್ದು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ State Steering Committee (SSC) ಸಭೆಯಲ್ಲಿ ಈ ಕೆಳಕಂಡ 05 ಪ್ರವಾಸಿ ತಾಣಗಳನ್ನು, ಯೋಜನೆಯ ಮಾರ್ಗಸೂಚಿ/ ಮಾನದಂಡಗಳನ್ನು ಅನುಸರಿಸಿ ಪರಿಗಣಿಸಲಾಗಿರುತ್ತದೆ. ದಿನಾಂಕ: 18.10.2022 ರಂದು ಈ ಕೆಳಕಂಡ 05 ಪ್ರಸ್ತಾವನೆಗಳನ್ನು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.<br><br>**ಕ್ರ.ಸಂ — ಪ್ರವಾಸಿ ತಾಣಗಳ ಹೆಸರು**<br>1. ಹಂಪಿ ಸ್ಮಾರಕಗಳು ವಿಜಯನಗರ ಜಿಲ್ಲೆ<br>2. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ , ಮೈಸೂರು<br>3. ಮಳಖೇಡ್ ಕೋಟೆ, ಕಲಬುರಗಿ<br>4. ದೇವಭಾಗ್ ಹಾಗೂ ಕಾಳಿ ನದಿ ಹಿನ್ನೀರು ಪ್ರದೇಶಾಭಿವೃದ್ಧಿ<br>5. ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ<br><br>ಮೇಲ್ಕಂಡ 05 ಪ್ರವಾಸಿ ತಾಣಗಳಲ್ಲಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ದಿನಾಂಕ: 07.11.2022 ರ ಪತ್ರದಲ್ಲಿ (1) ಹಂಪಿ ಸ್ಮಾರಕಗಳು ವಿಜಯನಗರ ಜಿಲ್ಲೆ. (2) ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು ಜಿಲ್ಲೆ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು **ಅನುಮೋದನೆ ನೀಡಲಾಗಿದೆ. ಆದರೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.** |

2. **ಕೇಂದ್ರ ಪುರಸ್ಕೃತ "ಪ್ರಸಾದ್ ಯೋಜನೆ"** ಯಡಿ ಮೈಸೂರು ಜಿಲ್ಲೆಯ ಶ್ರೀ ಚಾಮುಂಡೇಶ್ವರಿ ದೇವಿ ಸನ್ನಿಧಾನವನ್ನು ರೂ.45.70 ಕೋಟಿಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ **ದಿನಾಂಕ: 14.06.2023 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಆದರೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.**

3. **ಕೇಂದ್ರ ಪುರಸ್ಕೃತ "ಪ್ರಸಾದ್ ಯೋಜನೆ" -2.0** ರಡಿ ಈ ಕೆಳಕಂಡ 07 ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಸಂಬಂಧ ದಿನಾಂಕ: 08.06.2022 ರಂದು ಪ್ರಸ್ತಾವನೆಗಳನ್ನು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಸಲ್ಲಿಸಲಾಗಿರುತ್ತದೆ.

| ಕ್ರ.ಸಂ | ಪ್ರವಾಸಿ ತಾಣಗಳ ಹೆಸರು |
|---|---|
| 1. | ಮಧ್ವವನ ಕುಂಜಾರುಗಿರಿ, ಉಡುಪಿ ಜಿಲ್ಲೆ. |
| 2. | ಪಾಪನಾಶ ದೇವಸ್ಥಾನ, ಬೀದರ್ ಜಿಲ್ಲೆ |
| 3. | ಶ್ರೀ ರೇಣುಕಾದೇವಿ ಯಲ್ಲಮ್ಮ ದೇವಸ್ಥಾನ ಸವದತ್ತಿ, ಬೆಳಗಾವಿ ಜಿಲ್ಲೆ. |
| 4. | ಶ್ರೀ ಅನಂತಶಯನ ದೇವಸ್ಥಾನ, ಬೀದರ್ ಜಿಲ್ಲೆ |
| 5. | ನರಸಿಂಹ ಗುಹಾಮತರ ದೇವಾಲಯ, ಬೀದರ್ ಜಿಲ್ಲೆ. |
| 6. | ಜಲಸಾಂಗ್ವಿ ದೇವಸ್ಥಾನ ಬೀದರ್ ಜಿಲ್ಲೆ. |
| 7. | ಗುರುನಾನಕ ಝೀರಾ, ಬೀದರ್ ಜಿಲ್ಲೆ. |

ಮೇಲ್ಕಂಡ 07 ಪ್ರಸ್ತಾವನೆಗಳಲ್ಲಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದಿಂದ (1) ಮಧ್ವವನ ಕುಂಜಾರುಗಿರಿ, ಉಡುಪಿ ಜಿಲ್ಲೆ. (2) ಪಾಪನಾಶ ದೇವಸ್ಥಾನ, ಬೀದರ್ ಜಿಲ್ಲೆ (3) ಶ್ರೀ ಕ್ಷೇತ್ರ ಶ್ರೀ ರೇಣುಕಾ ದೇವಿ ಯಲ್ಲಮ್ಮ ದೇವಸ್ಥಾನ ಸವದತ್ತಿ, ಬೆಳಗಾವಿ ಜಿಲ್ಲೆ, ಈ 03 ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು **ದಿನಾಂಕ: 21.09.2022 ರಂದು ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಆದರೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.**

ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಸ್ವದೇಶ್ ದರ್ಶನ್ ಯೋಜನೆ-2.0 ಹಾಗೂ ಪ್ರಸಾದ್ ಯೋಜನೆ-2.0 ಯೋಜನೆಗಳಡಿ ಸಲ್ಲಿಕೆಯಾದ ಪ್ರಸ್ತಾವನೆಗಳಲ್ಲಿ, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಗಳನ್ನು ಮಾತ್ರ ಪರಿಗಣಿಸಲಾಗಿದ್ದು, ಉಳಿದ ಪ್ರಸ್ತಾವನೆಗಳು ತಿರಸ್ಕೃತಗೊಂಡಿರುತ್ತವೆ.

| | | |
|---|---|---|
| ಇ) | ಕಳೆದ 8 ವರ್ಷಗಳಿಂದ ಸದರಿ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನವೆಷ್ಟು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಕಳೆದ 08 ವರ್ಷಗಳಿಂದ ಸದರಿ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. |

**TOR 132 TDV 2023**

(ಹೆಚ್.ಕೆ.ಪಾಟೀಲ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 741ಕ್ಕೆ

# ಅನುಬಂಧ

## 1. ಸ್ವದೇಶಿ ದರ್ಶನ ಯೋಜನೆಯ ಮುಖ್ಯ ಉದ್ದೇಶಗಳು :

- ಇದೊಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಕೇಂದ್ರ ಪುರಸ್ಕೃತ ಥೀಮ್ ಧಾರಿತ ಯೋಜನೆಯಾಗಿದೆ.
- ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯ ಪ್ರಮುಖ ಉತ್ತೇಜಕವಾಗಿ ಪ್ರವಾಸೋದ್ಯಮವನ್ನು ಬೆಳೆಸುವುದು.
- ಯೋಜಿತ ಮತ್ತು ಆದ್ಯತೆಯ ರೀತಿಯಲ್ಲಿ ಪ್ರವಾಸಿ ಸಾಮರ್ಥ್ಯವನ್ನು ಹೊಂದಿರುವ ಸರ್ಕ್ಯೂಟ್‌ಗಳನ್ನು ಅಭಿವೃದ್ಧಿಪಡಿಸುವುದು.
- ದೇಶದಲ್ಲಿ ಜೀವನೋಪಾಯವನ್ನು ಸೃಷ್ಟಿಸಲು ದೇಶದ ಸಾಂಸ್ಕೃತಿಕ ಮತ್ತು ಪರಂಪರೆಯ ಮೌಲ್ಯವನ್ನು ಉತ್ತೇಜಿಸುವುದು ಹಾಗೂ ಪ್ರಸರಣಗೊಳಿಸುವುದು.
- ಅಭಿವೃದ್ಧಿಶೀಲ ಪ್ರಪಂಚದಿಂದ ಸುಸ್ಥಿರ ರೀತಿಯಲ್ಲಿ ಪ್ರವಾಸಿ ಆಕರ್ಷಣೆಯನ್ನು ಹೆಚ್ಚಿಸುವುದು ಸರ್ಕ್ಯೂಟ್/ಗಮ್ಯಸ್ಥಾನಗಳಲ್ಲಿ ವರ್ಗ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.
- ಸಮುದಾಯ ಆಧಾರಿತ ಅಭಿವೃದ್ಧಿ ಮತ್ತು ಬಡವರ ಪರವಾದ ಪ್ರವಾಸೋದ್ಯಮ ವಿಧಾನವನ್ನು ಅನುಸರಿಸುವುದು.
- ಸ್ಥಳೀಯರಲ್ಲಿ ಜಾಗೃತಿ ಮೂಡಿಸುವುದು

## 2. ಪ್ರಸಾದ್ ಯೋಜನೆಯ ಮುಖ್ಯ ಉದ್ದೇಶಗಳು:-

- ಇದೊಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಹಾಲಿ ಇರುವ ಪ್ರಮುಖ ಯಾತ್ರಾ ಸ್ಥಳಗಳನ್ನು ಉನ್ನತೀಕರಿಸುವ ಹಾಗೂ ಹೆಚ್ಚು ಸೌಕರ್ಯಗಳನ್ನು ಒದಗಿಸಲು ರೂಪಿಸುವ ಯೋಜನೆಯಾಗಿದೆ.
- ಧಾರ್ಮಿಕ ಯಾತ್ರ ಸ್ಥಳಗಳ ಪ್ರವಾಸವನ್ನು ಯೋಜನಾ ಬದ್ಧವಾಗಿ ಸಂಯೋಜಿಸಿ ಸುಸ್ಥಿರವಾಗಿ ಅಭಿವೃದ್ಧಿಗೊಳಿಸುವುದು.
- ಧಾರ್ಮಿಕ ಯಾತ್ರ ಪ್ರವಾಸೋದ್ಯವನ್ನು ನೇರವಾಗಿ ಹಾಗೂ ವಿವಿಧ ಉದ್ದೇಶಗಳ ಪರಿಣಾಮದಿಂದ ಉದ್ಯೋಗ ಸೃಷ್ಟಿಸುವುದು.
- ಧಾರ್ಮಿಕ ಯಾತ್ರ ಸ್ಥಳಗಳ ಅಭಿವೃದ್ಧಿಯನ್ನು ಎಲ್ಲಾ ವರ್ಗಗಳಿಗೂ ಹಾಗೂ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವುದು.
- ಪ್ರವಾಸಿಗರನ್ನು ಆಕರ್ಷಿಸಲು ಅತ್ಯುನ್ನತ ವಿಶ್ವದರ್ಜೆಯ ವಿವಿಧ ಮೂಲ ಸೌಲಭ್ಯಗಳನ್ನು ನಿರ್ಮಿಸಿ ಸುಸ್ಥಿರ ಅಭಿವೃದ್ಧಿಪಡಿಸುವುದು.
- ಸ್ಥಳೀಯ ಸಮೂಹಗಳಿಗೆ ಪ್ರವಾಸೋದ್ಯಮದ ಬಗ್ಗೆ ಅರಿವುಮೂಡಿಸುವುದು ಹಾಗೂ ಅದರಿಂದ ಅವರಿಗೆ ಆದಾಯ ಮೂಲಗಳನ್ನು ಗಳಿಸುವುದು ಮತ್ತು ಇದರಿಂದ ಅವರ ಜೀವನಮಟ್ಟವನ್ನು ಸುಧಾರಿಸುವುದು ಇದರಿಂದಾಗಿ ಸ್ಥಳೀಯ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವುದು.
- ಪ್ರಮುಖ ಪ್ರವಾಸಿ ಸ್ಥಳಗಳನ್ನು ಸ್ಥಳೀಯ ಕಲೆ, ಸಂಸ್ಕೃತಿಗೆ ಕರಕುಶಲ ವಸ್ತುಗಳು ಹಾಗೂ ಆಹಾರ ಮತ್ತು ಜೀವನಾಧಾರಗಳನ್ನು ಗುರುತಿಸಿ ಪ್ರಚಾರ ಪಡಿಸುವುದು.